1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಮನಗರ

Spl.C.134/2022

ದಿಃ 04.01.2024

(ಸಾಕ್ಷಿಗೆ ಪ್ರಮಾಣವಚನವನ್ನು ಬೋಧಿಸಲಾಯಿತು)

Cw-1 Pw-3

| | | |
|---|---|---|
| ಹೆಸರು | ಃ | ವೆಂಕಟಲಕ್ಷ್ಮಮ್ಮ |
| ಗಂಡನ ಹೆಸರು | ಃ | ಪ್ರವೀಣ್ ಕುಮಾರ್ |
| ವಯಸ್ಸು | ಃ | 31 ವರ್ಷ |
| ಉದ್ಯೋಗ | ಃ | ಟೈಲರಿಂಗ್ ಕೆಲಸ |
| ವಾಸಸ್ಥಳ | ಃ | ವಿರುಪಸಂದ್ರ |

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

1. ಚಾಸಾಃ2 ನನ್ನ ಗಂಡ.

2. ನನಗೆ ಚಾಸಾಃ 3 ರಿಂದ 8 ಸಹ ಗೊತ್ತು.

3. ನಾವು ಹಿಂದೂ ಲಂಬಾಣಿ ಜಾತಿಗೆ ಸೇರಿದವರಾಗಿರುತ್ತೇವೆ.

4. ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಒಕ್ಕಲಿಗ ಜಾತಿಗೆ ಸೇರಿದವರು ಎಂದು ನನಗೆ ಗೊತ್ತು.

5. ಅವರಿಗೆ ನಮ್ಮ ಜಾತಿ ಗೊತ್ತು.

6. ದಿಃ 05.06.2022 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಚಾಸಾಃ2 ನಮ್ಮ ಮನೆಯಕೊಟ್ಟಿಗೆಯಲ್ಲಿ ಊಟ ಮಾಡುತ್ತಿದ್ದಾಗ ಈಗ ನ್ಯಾಯಾಲಯದಲ್ಲಿ ಹಾಜರಿರುವ

ಆರೋಪಿತರು ಒಮ್ಮಿಂದೊಮ್ಮೆಲೆ ನಮ್ಮ ಮನೆಯ ಒಳಗೆ ಹೊಕ್ಕಿ ಜಗಳ ಕಾಯ್ದು ಎಳೆದಾಡಿ ನಮ್ಮಿಬ್ಬರಿಗೂ ಕೈಯಿಂದ ಹೊಡೆದಿರುತ್ತಾರೆ.

7. ಅದರಿಂದ ನನ್ನ ಬಲಗೈಗೆ ಗಾಯವಾಗಿತ್ತು.

8. ನನ್ನ ಜುಟ್ಟನ್ನು ಹಿಡಿದು ಎಳೆದಾಡಿರುತ್ತಾರೆ.

9. ನನ್ನ ಗಂಡನ ಮೂಗಿನ ಮೇಲೆ ಮುಖದ ಮೇಲೆ ಮತ್ತು ಬೆನ್ನಿನ ಮೇಲೆ ಹೊಡೆದು ಗಾಯಗೊಳಿಸಿರುತ್ತಾರೆ.

10. ಆಗ ಆರೋಪಿತರು ನಮಗೆ ನೀವು ಲಂಬಾಣಿ ಜಾತಿಯವರು ಎಂದು ಜಾತಿ ನಿಂದನೆ ಮಾಡಿ ನಮಗೆ ಊರಿನಿದ ಹೊರಗೆ ಹೋಗಲು ಎಚ್ಚರಿಸಿರುತ್ತಾರೆ.

11. ಊರಿನಿಂದ ಹೊರಗೆ ಹೋಗದಿದ್ದರೆ ನಮ್ಮನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ.

12. ಆ ಸಮಯದಲ್ಲಿ ಚಾಸಾಃ3 ರಿಂದ 8 ಇವರು ಜಗಳ ಬಿಡಿಸಿರುತ್ತಾರೆ.

13. ನನ್ನ ಗಂಡನಾದ ಚಾಸಾಃ2 ಈತನಿಗೆ ಸಾತನೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆಂದು ನಮ್ಮ ಪಕ್ಕದ ಮನೆಯ ಬಾಲಾಜಿ ಈತನು ಕರೆದುಕೊಂಡು ಹೋಗಿರುತ್ತಾನೆ

14. ನಂತರ ಅದೇ ದಿನ ನಾನು ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದು ಕೊಡಲು ಪ್ರಯತ್ನಿಸಿದರು ಸಹ ಪೊಲೀಸರು ಆ ದಿನ

ಸ್ವೀಕರಿಸದ ಕಾರಣ ಪುನಃ ಮಾರನೇ ದಿನ ಹೋಗಿ ಪಿರ್ಯಾದು ಸಲ್ಲಿಸಿರುತ್ತೇನೆ.

15. ಸದರಿ ಪಿರ್ಯಾದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ನಿಪಿಃ3 ಎಂದು ಅದರ ಮೇಲಿರುವ ನನ್ನ ಸಹಿಯನ್ನು ನಿಪಿ3ಎ ಎಂದು ಗುರುತಿಸಲಾಯಿತು.

16. ನಂತರ ದಿಃ 10.06.2022 ರಂದು ಬೆಃ 10.00 ರಿಂದ 10.30 ರ ವರೆಗೆ ನನ್ನ ತೋರಿಕೆ ಮೇರೆಗೆ ಪೊಲೀಸರು ಘಟನಾ ಸ್ಥಳವೆಂದು ನಮ್ಮ ಮನಗೆ ಬಂದು ಒಂದು ಸ್ಥಳ ಪಂಚನಾಮೆ ಮಾಡಿ ಅದರಡಿಯಲ್ಲಿ ನನ್ನ ಗಂಡ ಚಾಸಾಃ 2 ಈತನಿಗೆ ಸಂಬಂಧಿಸಿದ ಕಪ್ಪು ಬಣ್ಣದ ಹರಿದ ಅಂಗಿಯನ್ನು ಅಮಾನತ್ತುಪಡಿಸಿಕೊಂಡು ನಂತರ ನಮ್ಮ ಸಹಿ ಪಡೆದಿರುತ್ತಾರೆ.

17. ಸದರಿ ಸ್ಥಳ ಪಂಚನಾಮೆಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ನಿಪಿಃ 4 ಎಂದು ಮತ್ತು ಅದರ ಮೇಲಿರುವ ನನ್ನ ಸಹಿಯನ್ನು ನಿಪಿಃ4ಎ ಎಂದು ಗುರುತಿಸಲಾಯಿತು.

18. ಆ ಸಮಯದಲ್ಲಿ ಚಾಸಾಃ 7 ಮತ್ತು 8 ಇವರು ಸಹ ಹಾಜರಿದ್ದರು.

19. ನಿಪಿಃ4 ರ ಸಮಯದಲ್ಲಿಯೇ ಪೊಲೀಸರು ಒಂದು ವರ್ಣರಂಜಿತ ಛಾಯಚಿತ್ರವನ್ನು ತೆಗೆಸಿದ್ದು ಅದನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ನಿಪಿಃ5 ಎಂದು ಗುರುತಿಸಲಾಯಿತು.

20. ಸದರಿ ಅಮಾನತ್ತುಪಡಿಸಿಕೊಂಡ ಚಾಸಾಃ2 ಈತನ ಹರಿದ ಕಪ್ಪು ಅಂಗಿಯನ್ನು ಈಗ ನೋಡಿ ಗುರುತಿಸುತ್ತಿರುವುದರಿಂದ ಅದನ್ನು ಮುಮಾಃ1 ಎಂದು ಗುರುತಿಸಲಾಯಿತು.

21. ತದನಂತರ, ಸದರಿ ಏಟಿನಿಂದ ನನಗೆ ತುಂಬಾನೋವುನ ಕಾಣಿಸಿಕೊಂಡ ಕಾರಣ ದಿಃ 10.06.2022 ರಂದು ವೆಂಕಟರಾಯನದೊಡ್ಡಿ ಸರ್ಕಾರಿಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ.

22. ಅದೇ ದಿನ ನಾನು ಪೊಲೀಸರ ಮುಂದೆ ನನ್ನ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅಭಿಯೋಜಕರು ಕೋರಿದ್ದಾರೆ. ಅದರಂತೆ ಸಾಕ್ಷಿಯನ್ನು ಪ್ರತಿಕೂಲ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ವಿಶೇಷ ಅಭಿಯೋಜಕರಿಗೆ ಅನುಮತಿ ನೀಡಲಾಗಿದೆ)**

ಪಾಟೀ ಸವಾಲುಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ

23. ಪೊಲೀಸರು ಘಟನಾ ಸ್ಥಳಕ್ಕೆ ನಿಪಿಃ4 ರಂತೆ ಸ್ಥಳ ಪಂಚನಾಮೆಯನ್ನು ಮಾಡಲು ದಿಃ 07.06.2022 ರಂದು ಬಂದಿದ್ದು 10.06.2022 ರಂದು ಅಲ್ಲ ಎಂಬುದು ಸರಿಯಲ್ಲ.

24. ಆ ರೀತಿ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

**ಪಾಟೀ ಸವಾಲುಃ ಶ್ರೀ. ಎಂ ಕೆ ಎನ್ ವಕೀಲರಿಂದ 2 ಮತ್ತು 3 ನೇ ಆರೋಪಿಗಳ ಪರವಾಗಿಃ**

25. ನಮ್ಮ ಊರಿನಲ್ಲಿ ಒಕ್ಕಲಿಗ ಸಮುದಾಯಕ್ಕೆ, ಪರಿಶಿಷ್ಟ ಜಾತಿಗೆ ಸೇರಿದ ಜನಾಂಗದವರು ಮತ್ತು ಹಿಂದೂ ಲಂಬಾಣಿ ಜಾತಿಗೆ ಸೇರಿದ ಜನಾಂಗದವರು ವಾಸ ಮಾಡುತ್ತೇವೆ.

26. ನಾವು ವಾಸ ಮಾಡುವ ಬೀದಿಯಲ್ಲಿ ಲಂಬಾಣಿ ಜಾತಿಗೆ ಸೇರಿದ ಜನರೇ ಹೆಚ್ಚಾಗಿ ವಾಸ ಮಾಡುತ್ತಾರೆ ಎಂದರೆ ಸರಿ.

27. ಒಕ್ಕಲಿಗ ಸಮುದಾಯಕ್ಕೆ ಸೇರಿದ ಆರೋಪಿತರ ಎರಡು ಮನೆ ಮಾತ್ರ ನಮ್ಮ ಬೀದಿಯಲ್ಲಿರುತ್ತವೆ ಎಂದರೆ ಸರಿ.

28. ನನ್ನ ಗಂಡ ಚಾಸಾಃ 2 ಕಳೆದ 5 ವರ್ಷಗಳಿಂದ ಟೈಲರಿಂಗ್ ಕೆಲಸ ಮಾಡುತ್ತಾನೆ.

29. ನನ್ನ ಗಂಡ ಮತ್ತು ಆರೋಪಿತರು ಮಾನವಿಕಾಯಿ ಕೂಲಿ ಕೆಲಸ ಕೂಡಿ ಗುತ್ತಿಗೆ ಆಧಾರದ ಮೇಲೆ ಮಾಡುತ್ತಾರೆ ಎಂಬುದು ಸರಿಯಲ್ಲ.

30. ನನ್ನ ಪಿರ್ಯಾದಿನಲ್ಲಿ ಯಾರ್ಯಾರಿಗೆ ಎಲ್ಲೆಲ್ಲಿ ಯಾವುದರಿಂದ ಮತ್ತು ಯಾರಿಂದ ಏಟುಗಳು ಆಗಿರುತ್ತವೆ ಎಂಬುದನ್ನು ಬರೆದಿರುತ್ತೇನೆ.

31. ನಮ್ಮ ನೆರೆಹೊರೆಯ ವ್ಯಕ್ತಿ ಬಾಲಾಜಿ ಈತನು ಚಾಸಾಃ2 ಈತನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋದ ವಿಚಾರ ನಾನು ಪೊಲೀಸರ ಮುಂದೆ ಅಥವಾ ನಿಪಿಃ3 ರಲ್ಲಾಗಲೀ ಕಾಣಿಸಿರುವುದಿಲ್ಲ.

32. ಚಾಸಾ:3 ರಿಂದ 8 ಇವರು ಘಟನೆಯನ್ನು ನೋಡಿ ಬಿಡಿಸಿರುತ್ತಾರೆ ಎಂದು ನನ್ನ ಪಿರ್ಯಾದಿನಲ್ಲಿ ಕಾಣಿಸಿರುತ್ತೇನೆ.

33. ದಿ:10.06.2022 ರ ವರೆಗೆ ನಾನು ಎಲ್ಲಾ ಕೆಲಸಗಳನ್ನು ಮಾಡಿರುತ್ತೇನೆ ಎಂದರೆ ಹೆಚ್ಚು ಕೆಲಸ ಮಾಡಲು ಆಗದೇ ಇದ್ದುದರಿಂದ ಹೆಚ್ಚಾಗಿ ಮಾಡಿರುವುದಿಲ್ಲ ಎಂದು ಹೇಳುತ್ತೇನೆ.

34. ಆ ಅವಧಿಯಲ್ಲಿ ನಾನು ಗಾರ್ಮೆಂಟ್ ಕೆಲಸಕ್ಕೆ ಹೋಗುತ್ತಿದ್ದೆನು ಎಂಬುದು ಸರಿ.

35. ಘಟನೆಯ ದಿನಾಂಕದಿಂದ 10.06.2022 ರ ವರೆಗಿನ ಅವಧಿಯಲ್ಲಿ ನಾನು ಔಷಧಿಯನ್ನು ಮಾತ್ರ ತೆಗೆದುಕೊಂಡಿದ್ದು ಆ ಕುರಿತು ಯಾವುದೇ ದಾಖಲಾತಿಯನ್ನು ಪೊಲೀಸರಿಗೆ ನೀಡಿರುವುದಿಲ್ಲ.

36. ಚಾಸಾ:4 ಮತ್ತು 5 ನನಗೆ ಹತ್ತಿರದ ಸಂಬಂಧಿಕರು.

37. ಚಾಸಾ:4 ಇವಳ ಗಂಡನ ಊರು ಶಿವನಹಳ್ಳಿಯ ಹತ್ತಿರ ಇರುವ ಅರಳಾಳು ತಾಂಡ ಇರುತ್ತದೆ.

38. ನಮ್ಮ ಮನೆಯ ಹತ್ತಿರ ಗಲಾಟೆಯಾದರೆ ನಮ್ಮ ಬೀದಿಯಲ್ಲಿನ ಎಲ್ಲಾ ವಾಸಿಗರಿಗೆ ಸದ್ದು ಕೇಳಿಸುತ್ತದೆ ಎಂಬುದು ಸರಿ.

39. ಚಾಸಾ: 3 ರಿಂದ 8 ಇವರನ್ನು ಹೊರತುಪಡಿಸಿ ಸದರಿ ಗಲಾಟೆಯ ಸಮಯದಲ್ಲಿ ಬೇರಾರು ಆ ಸಮಯದಲ್ಲಿ ಬಂದಿರಲಿಲ್ಲ.

40. ನನ್ನ ಗಂಡ ಚಾಸಾಃ2 ಮದ್ಯವ್ಯಸನಿ ಎಂಬುದು ಸರಿ.

41. ನಿಪಿಃ3 ರಲ್ಲಿ ಕಾಣಿಸಿರುವ ಹಿಂದಿನ ಗಲಾಟೆಯ ವಿಚಾರವಾಗಿ ಯಾವುದೇ ದೂರನ್ನು ಸಲ್ಲಿಸಿರುವುದಿಲ್ಲ.

42. ಸದರಿ ಹಿಂದಿನ ಗಲಾಟೆ ಯಾವ ದಿನಾಂಕದಂದು ಮತ್ತು ಯಾವ ಕಾರಣಕ್ಕೆ ನಡೆದಿರುತ್ತದೆ ಎಂಬುದನ್ನು ಪೊಲೀಸರ ಮುಂದೆ ನಾನು ಹೇಳಿರುವುದಿಲ್ಲ.

43. ಚಾಸಾಃ 2 ಮತ್ತು ಆರೋಪಿತರ ನಡುವೆ ಮಾವಿನ ತೋಟದ ಕೂಲಿ ಹಣ ಹಂಚಿಕೊಳ್ಳುವ ವಿಚಾರವಾಗಿ ಮನಸ್ತಾಪ ಇರುತ್ತದೆ ಎಂದರೆ ಸರಿಯಲ್ಲ.

44. ನನ್ನ ಗಂಡ ಚಾಸಾಃ2 ಈತನು ಮದ್ಯದ ಅಮಲಿನಲ್ಲಿ ತನ್ನಷ್ಟಕ್ಕೆ ತಾನೇ ಬಿದ್ದು ಗಾಯಗೊಂಡು ಅದನ್ನೆ ನೆಪ ಮಾಡಿಕೊಂಡು ಆರೋಪಿತರ ವಿರುದ್ಧ ಇರುವ ಹಣಕಾಸಿನ ಮನಸ್ತಾಪದ ಕುರಿತು ದ್ವೇಷ ಸಾಧಿಸಲು ಅವರ ವಿರುದ್ಧ ಒಂದು ಸುಳ್ಳು ದೂರನ್ನು ನನ್ನ ಮುಖಾಂತರ ಕೊಡಿಸಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ.

45. ಗಲಾಟೆಯ ಸಮಯದಲ್ಲಿ ನಮ್ಮ ಮನೆಯಲ್ಲಿ ಅಡುಗೆ ಮತ್ತು ಪಾತ್ರೆಗಳು ಚೆಲ್ಲಿ ಹೋಗಿದ್ದವು.

46. ಸದರಿ ವಿಚಾರವನ್ನು ನಾನು ನನ್ನ ಪಿರ್ಯಾದಿನಲ್ಲಿ ಕಾಣಿಸಿರುತ್ತೇನೆ.

47. ದಿಃ 05.06.2022 ರಂದು ರಾತ್ರಿ 9.00 ಗಂಟೆ ಸಮಯದಲ್ಲಿ ನಾನು ಮತ್ತು ನನ್ನ ಗಂಡ ಚಾಸಾಃ2 ನಮ್ಮ ಮನೆಯಕೊಟ್ಟಿಗೆಯಲ್ಲಿ ಊಟ ಮಾಡುತ್ತಿದ್ದಾಗ ಈಗ ನ್ಯಾಯಾಲಯದಲ್ಲಿ ಹಾಜರಿರುವ ಆರೋಪಿತರು ಒಮ್ಮಿಂದೊಮ್ಮೆಲೆ ನಮ್ಮ ಮನೆಯ ಒಳಗೆ ಹೊಕ್ಕಿ ಜಗಳ ಕಾಯ್ದು ಎಳೆದಾಡಿ ನಮ್ಮಿಬ್ಬರಿಗೂ ಕೈಯಿಂದ ಹೊಡೆದಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

48. ಅದರಿಂದ ನನ್ನ ಬಲಗೈಗೆ ಗಾಯವಾಗಿತ್ತು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

49. ನನ್ನ ಜುಟ್ಟನ್ನು ಹಿಡಿದು ಎಳೆದಾಡಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

50. ನನ್ನ ಗಂಡನ ಮೂಗಿನ ಮೇಲೆ ಮುಖದ ಮೇಲೆ ಮತ್ತು ಬೆನ್ನಿನ ಮೇಲೆ ಹೊಡೆದು ಗಾಯಗೊಳಿಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

51. ಆಗ ಆರೋಪಿತರು ನಮಗೆ ನೀವು ಲಂಬಾಣಿ ಜಾತಿಯವರು ಎಂದು ಜಾತಿ ನಿಂದನೆ ಮಾಡಿ ನಮಗೆ ಊರಿನಿದ ಹೊರಗೆ ಹೋಗಲು ಎಚ್ಚರಿಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

52. ಊರಿನಿಂದ ಹೊರಗೆ ಹೋಗದಿದ್ದರೆ ನಮ್ಮನ್ನು ಕೊಲೆ ಮಾಡುವುದಾಗಿ ಬೆದರಿಕೆ ಹಾಕಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

53. ಆ ಸಮಯದಲ್ಲಿ ಚಾಸಾಃ3 ರಿಂದ 8 ಇವರು ಜಗಳ ಬಿಡಿಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

54. ನನ್ನ ಗಂಡನಾದ ಚಾಸಾಃ2 ಈತನಿಗೆ ಸಾತನೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆಂದು ನಮ್ಮ ಪಕ್ಕದ ಮನೆಯ ಬಾಲಾಜಿ ಈತನು ಕರೆದುಕೊಂಡು ಹೋಗಿರುತ್ತಾನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

55. ನಂತರ ಅದೇ ದಿನ ನಾನು ಪೊಲೀಸ್ ಠಾಣೆಗೆ ಹೋಗಿ ಪಿರ್ಯಾದು ಕೊಡಲು ಪ್ರಯತ್ನಿಸಿದರು ಸಹ ಪೊಲೀಸರು ಆ ದಿನ ಸ್ವೀಕರಿಸದ ಕಾರಣ ಪುನಃ ಮಾರನೇ ದಿನ ಹೋಗಿ ಪಿರ್ಯಾದು ಸಲ್ಲಿಸಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

56. ನಂತರ ದಿಃ 10.06.2022 ರಂದು ಬೆಃ 10.00 ರಿಂದ 10.30 ರ ವರೆಗೆ ನನ್ನ ತೋರಿಕೆ ಮೇರೆಗೆ ಪೊಲೀಸರು ಘಟನಾ ಸ್ಥಳವೆಂದು ನಮ್ಮ ಮನಗೆ ಬಂದು ಒಂದು ಸ್ಥಳ ಪಂಚನಾಮೆ ಮಾಡಿ ಅದರಡಿಯಲ್ಲಿ ನನ್ನ ಗಂಡ ಚಾಸಾಃ 2 ಈತನಿಗೆ ಸಂಬಂಧಿಸಿದ ಕಪ್ಪು ಬಣ್ಣದ ಹರಿದ ಅಂಗಿಯನ್ನು ಅಮಾನತ್ತುಪಡಿಸಿಕೊಂಡು ನಂತರ ನಮ್ಮ ಸಹಿ ಪಡೆದಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

57. ಆ ಸಮಯದಲ್ಲಿ ಚಾಸಾಃ 7 ಮತ್ತು 8 ಇವರು ಸಹ ಹಾಜರಿದ್ದರು, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

58. ನಿಪಿಃ4 ರ ಸಮಯದಲ್ಲಿಯೇ ಪೊಲೀಸರು ಒಂದು ವರ್ಣರಂಜಿತ ಛಾಯಚಿತ್ರವನ್ನು ತೆಗೆಸಿರುತ್ತಾರೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

59. ಸದರಿ ಅಮಾನತ್ತುಪಡಿಸಿಕೊಂಡ ಚಾಸಾಃ2 ಈತನ ಹರಿದ ಕಪ್ಪು ಅಂಗಿಯನ್ನು ಈಗ ನೋಡಿ ಗುರುತಿಸುತ್ತಿದ್ದೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

60. ತದನಂತರ, ಸದರಿ ಏಟಿನಿಂದ ನನಗೆ ತುಂಬಾನೋವುನ ಕಾಣಿಸಿಕೊಂಡ ಕಾರಣ ದಿಃ 10.06.2022 ರಂದು ವೆಂಕಟರಾಯನದೊಡ್ಡಿ ಸರ್ಕಾರಿ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

61. ಅದೇ ದಿನ ನಾನು ಪೊಲೀಸರ ಮುಂದೆ ನನ್ನ ಮುಂದುವರೆದ ಹೇಳಿಕೆಯನ್ನು ನೀಡಿರುತ್ತೇನೆ, ಎಂದು ಸುಳ್ಳು ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

62. ಮುಮಾಃ 1 ಚಾಸಾಃ 2 ಈತನಿಗೆ ಸಂಬಂಧಿಸದೇ ಇದ್ದರೂ ಸಹ ಅದನ್ನು ಕೇವಲ ಪ್ರಕರಣವನ್ನು ಬಲಪಡಿಸಿಕೊಳ್ಳಲು ಅಳವಡಿಸಿಕೊಂಡಿದ್ದು ಇರುತ್ತದೆ ಎಂಬುದು ಸರಿಯಲ್ಲ.

63. ಸರ್ಕಾರದಿಂದ ನನಗೆ ಪರಿಹಾರ ಬಂದಿದರುತ್ತದೆ ಎಂದರೆ ಸರಿ.

64. ಪರಿಹಾರ ಪಡೆಯುವ ಉದ್ದೇಶದಿಂದ ಸುಳ್ಳು ದೂರನ್ನು ಸಲ್ಲಿಸಿರುತ್ತೇನೆ ಎಂಬುದು ಸರಿಯಲ್ಲ.

**ಪಾಟೀ ಸವಾಲುಃ ಶ್ರೀ. ಎಸ್ ಎನ್ ವಕೀಲರಿಂದ 1ನೇ ಆರೋಪಿತನ ಪರವಾಗಿಃ ಮೇಲಿನ ಪಾಟೀ ಸವಾಲನ್ನೆ ಅಳವಡಿಸಿಕೊಂಡಿರುತ್ತಾರೆ.**

ಮರುವಿಚಾರಣೆಃ ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ

(ಜಿ ಡಿ ಮಹಾವರ್ಕರ್)
1ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು/
ವಿಶೇಷ ನ್ಯಾಯಾಧೀಶರು,
ರಾಮನಗರ.